ಒಂದು ರೀತಿಯಲ್ಲಿ ಪಾಂಡವರ ಅಜ್ಞಾತವಾಸಕ್ಕೆ ಸಮಾನವಾದದ್ದಾಗಿದೆ ಅನಿಸಿತು.

ತಾನೀಗ ಆನೇಕಲ್ಲಲ್ಲಿ ಕುಳಿತು, ಬೆಂಗಳೂರಲ್ಲಿ ಅಲೆದು ಎರಡುವರ್ಷದಲ್ಲಿ ಕಿಸಿದದ್ದು ಏನು ಅನ್ನುವ ಪ್ರಶ್ನೆ ವ್ಯಂಗ್ಯದಲ್ಲಿ ಕೆಣಕಿ, ಸವಾಲನ್ನು ಎದುರಿಸು ಅಂತ ದೂಡುತ್ತಿತ್ತು. ಜೊತೆಗೆ ಕೊಡುವ ಸಂಭಾವನೆಯ ಮೊತ್ತ ಪ್ರಚೋದಿಸುತ್ತಿತ್ತು. ಆ ಕಡೆ ಲ್ಯಾಪ್‌ಟಾಪಿನಲ್ಲಿ ಏನೋ ಮಾಡುತ್ತ ಅವರಿಬ್ಬರು ಮೌನವಾಗಿದ್ದರು. ಓದಿ ಮುಗಿಸಿದವ ತಲೆಯೆತ್ತಿ ಅವರತ್ತ ನೋಡಿದ. 'ಅವಸರವೇನಿಲ್ಲ, ಬೇಕಿದ್ದರೆ ಒಂದು ದಿವಸ ಸಮಯ ತೆಗೆದುಕೊಂಡು ಹೇಳಬಹುದು' ಅಂದ ರೆಡ್ಡಿ ಲ್ಯಾಪ್‌ಟಾಪಿಂದ ಕಣ್ಣು ತೆಗೆಯದೆ. 'ಇಲ್ಲ, ನಾನಿದಕ್ಕೆ ರೆಡಿ. ಯಾವಾಗ ಸುರುವಾಗೋದು ಎಂದು ತಿಳಿಸಿದರೆ ಬರತೇನೆ' ಅಂದ. 'ಆಯ್ತು ಹಾಗಿದ್ರೆ. ಒಂದು ವಾರ ಎಲ್ಲಾದ್ರು ಹೋಗುವುದಿದ್ದರೆ, ಯಾರನ್ನಾದರು ಭೆಟ್ಟಿಯಾಗಬೇಕಿದ್ದರೆ ಮುಗಿಸಿ ಮಾನಸಿಕ ತಯಾರಿ ಮಾಡಿಕೊಳ್ಳಿ. ನಂತರ ಅರವತ್ತು ದಿನ ಯಾರನ್ನು ಭೆಟ್ಟಿಯಾಗೋಕಾಗೋದಿಲ್ಲ. ಸರಿಯಾಗಿ ಮುಂದಿನ ಸೋಮವಾರ ಬೆಳಗ್ಗೆ ಇಲ್ಲಿಗೆ ಬನ್ನಿ. ಒಂದುವೇಳೆ ಬರದಿದ್ದರೆ ಕರಾರು ರದ್ದಾಗಿದೆ ಅಂತ ಕಂಪನಿ ಭಾವಿಸುತ್ತದೆ' ಅಂದ. ಅಗ್ರಿಮೆಂಟ್‌ನ ಮೂರೂ ಶೀಟುಗಳಲ್ಲಿ ಸಹಿ ಮಾಡಿ ಕೊಟ್ಟು ಹೊರಬಂದವ ಆನೇಕಲ್ಲಿಗೆ ಹೋಗಿಬರೋಣವ ಅಂದುಕೊಂಡ. ಆಮೇಲೆ ಬೇಡವೆನಿಸಿತು. ಅಲ್ಲಿ ಯಾರೊಂದಿಗೂ ಈ ವಿಷಯ ಹೇಳುವಂತಿಲ್ಲ, ಕರಾರು ಪ್ರಕಾರ. ಅಂತಃಕರಣದ ಕ್ಷಣವೊಂದರಲ್ಲಿ ಸ್ತಿಮಿತ ತಪ್ಪಿ ಯಾಕೆ ಸುಮ್ಮನೆ ಹಿಂಸೆ ಅಂದುಕೊಂಡವ ಬೆಂಗಳೂರಲ್ಲೆ ಉಳಿದಿದ್ದ. ರೂಮಲ್ಲಿ ಸ್ಥಳಕೊಟ್ಟ ರಮೇಶನಿಗೆ ಎರಡು ತಿಂಗಳು ಸೋದರಮಾವನ ಊರಿಗೆ ಹೋಗತಾ ಇದ್ದೇನೆ ಅಂತ ಹೇಳಿ, ಸೋಮವಾರ ಚಿಕ್ಕ ಬ್ಯಾಗಿನೊಂದಿಗೆ ಬ್ರಿಗೇಡ್ ರೋಡಿನಲ್ಲಿ ಹಾಜರಾದ. ರೆಡ್ಡಿ ದಿವೋತ್ತಮನ ಆಧಾರ್ ಕಾರ್ಡು, ವೋಟರ್ ಐಡಿ, ಪಾಸ್‌ಪೋರ್ಟು, ಪೋಸ್ಟ್ ಗ್ರಾಜ್ಯುಯೇಶನ್ ಸರ್ಟಿಫಿಕೇಟು ಎಲ್ಲ ಟೇಬಲ್ಲಿನಮೇಲೆ ರಾಶಿ ಹಾಕಿಸಿಕೊಂಡು ಅವನ್ನು ಒಂದು ಜಿಪ್‌ಬ್ಯಾಗಲ್ಲಿ ತುಂಬಿ, 'ಇವೆಲ್ಲ ಗಾಂಗೇಯನ ಸುಪರ್ದಿನಲ್ಲಿರತವೆ. ಪ್ರಾಜೆಕ್ಟ್ ಮುಗಿದ ದಿನ ಎಲ್ಲ ವಾಪಸು ಕೊಡತೇವೆ, ಚಿಂತೆ ಬೇಡ. ಅಂದಹಾಗೆ ಡ್ರೈವಿಂಗ್ ಲೈಸೆನ್ಸ್?' ಅಂದ. 'ಇನ್ನೂ ಇಲ್ಲ; ವೆಹಿಕಲಿಲ್ಲ' ಅನ್ನುವ ಉತ್ತರಕ್ಕೆ ಸರಿ ಅಂದವ ಚೆಕ್‌ಬುಕ್ ತೆಗೆದ. ದಿವೋತ್ತಮನ ಹೆಸರಿಗೆ ಚೆಕ್ ಬರೆದು ನಾಜೂಕಾಗಿ ಅದನ್ನು ಹರಿದು ಅವನ ಕೈಗೆ ಕೊಟ್ಟ. ಹತ್ತು ಲಕ್ಷಕ್ಕೆ ಬರೆದ ನೀಲಿ ನಸುಗೆಂಪು ಬಣ್ಣದಲ್ಲಿ ಮಿರುಗುವ ಚೆಕ್. 'ಇದು ಪೋಸ್ಟ್ ಡೇಟೆಡ್ ಚೆಕ್. ಅರವತ್ತು ದಿನ ಮುಗಿಸಿ ಬರುವ ದಿನದ ತಾರೀಕಿಗೆ ಇದೆ. ಆವತ್ತೆ ನಿಮ್ಮ ಬ್ಯಾಂಕಿಗೆ ಹಾಕಿಕೊಳ್ಳಬಹುದು. ಮುಂದೆ ನಮ್ಮ ಡಾಕ್ಯುಮೆಂಟರಿಗೆ ಜಾಸ್ತಿ ಕೊಡತೇವೆ. ಆದರೆ, ನೆನಪಿರ್ಲಿ, ಒಂದೇಒಂದು ದಿನ ಮೊದಲೂ ವಾಪಸು ಬರುವಂತಿಲ್ಲ; ನಿಬಂಧನೆಗಳನ್ನು ಮುರಿಯುವಂತಿಲ್ಲ' ಎಂದು ಎಚ್ಚರಿಸಿದ್ದ. ಆವತ್ತಿನ ಊಟ ಬ್ರಿಗೇಡು ರಸ್ತೆಯ ಹೋಟೆಲಲ್ಲಿ ಅವರೊಂದಿಗೆ ಆಯಿತು. ಊಟವಾಗುತ್ತಲೆ ಟ್ಯಾಕ್ಸಿಯಲ್ಲಿ ಪ್ರಾಜೆಕ್ಟಿನ ಪ್ರಾರಂಭದ ಪಯಣ ಸುರುವಾಗಿತ್ತು. ಜೊತೆಯಲ್ಲಿ ಗಾಂಗೇಯನಿದ್ದ. ಬೆಂಗಳೂರು ಪುಣೆ ಹೆದ್ದಾರಿಯಲ್ಲಿ ಸಾಗಿದ ಕಾರು ಸಂಜೆಯ ಹೊತ್ತಿಗೆ ಎಡಕ್ಕೆ ತಿರುಗಿ ಅರಣ್ಯ ಸುರುವಾಗಿ, ತಾಸಿನಮೇಲೆ ಈ ಪಟ್ಟಣದ ಹೋಟೆಲಿನೆದುರು ನಿತ್ತಿತ್ತು. ಆಗಲೆ ಕಾದಿರಿಸಿದ ರೂಮಿನಲ್ಲಿ ಲಗೇಜಿಡುತ್ತ, 'ಊಟ ಮುಗಿಸಿ ಮಲಗಿಬಿಡೋಣ, ನಾಳೆಯಿಡಿ ಇಲ್ಲಿರಬೇಕು' ಅಂದಿದ್ದ. ಆ ನಾಳೆ ಮುಗಿದು, ಈ ಗಳಿಗೆ ಬಂದಿತ್ತು. ತಿಂಡಿ ಮುಗಿಸಿ ವೇಟರನಿಗೆ ಹಣ ಕೊಟ್ಟ ಗಾಂಗೇಯನೆಂದ, 'ಸರಿ ಹಾಗಿದ್ರೆ. ಹೊರಟುಬಿಡುವ'. ತನ್ನ ಮುಖದತ್ತ ನೋಡಿದ ದಿವೋತ್ತಮನಿಗೆ, 'ನಿನ್ನ ಲಗೇಜಿನ ಜವಾಬ್ದಾರಿ ಕಂಪನೀದು. ಅದೇನು ಅಲ್ಲಿ ಬೇಡ' ಅಂದವ ಬಾಗಿಲಿನತ್ತ ಹೆಜ್ಜೆಯಿರಿಸಿದ. ತಿಂಡಿಗೆ ಬರುವಾಗಲೆ ಒಂದು ಅಂಡರವೇರು ಬನೀನು ಜೊತೆಗೆ ತಗೋ ಅಂತ ಹೇಳಿದ್ದು ಈಗರ್ಥವಾಯಿತು. ರಿಕ್ಷಾದಲ್ಲಿ ತನ್ನ ಪಕ್ಕದಲ್ಲಿ ಕೂಡ್ರಿಸಿಕೊಂಡು ಬಸ್‌ಸ್ಟ್ಯಾಂಡು ಅಂದ ಡ್ರೈವರನಿಗೆ. ಗಿಜಿಗಿಜಿ ಗದ್ದಲದ ನಡುವೆ ಇವನನ್ನೆಳೆದುಕೊಂಡು ಒಂದು